# ಕುವೆಂಪು ವಿಶ್ವವಿದ್ಯಾಲಯ
## ಅಭಿಲೇಖಾಲಯ ಕಾರ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451

**ಸಂಖ್ಯೆ:ಕುವಿ: ಅಭಿಲೇಖಾಲಯ/2018/** **ದಿನಾಂಕ: 26–09–2018.**

## <u>ಸುತ್ತೋಲೆ</u>

ವಿಷಯ: ವಿಶ್ವವಿದ್ಯಾಲಯದಲ್ಲಿ ಅಭಿಲೇಖಾಲಯವನ್ನು (ರೆಕಾರ್ಡ್ ರೂಂ) ಪ್ರಾರಂಭಿಸಿರುವ ಕುರಿತು.

ಉಲ್ಲೇಖ:1) ಕರ್ನಾಟಕ ಸಾರ್ವಜನಿಕ ದಾಖಲೆಗಳ ಅಧಿನಿಯಮ 2010
2) ಸರ್ಕಾರದ ಅಧಿಸೂಜನೆ ಸಂ:ಕೆಸಿಇಟಿ/ ರಾಪಸ/2011 / ದಿ: 26-06-2013
3) ಸರ್ಕಾರದ ಪತ್ರ ಸಂ:ಇಟಿ/135/ವಿವಿಧ/2017 ದಿ: 09–02–2018
4) ಮಾನ್ಯ ಕುಲಪತಿಗಳ ಅನುಮೋದನೆ ದಿ: 27–08–2018

***

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಗಳಲ್ಲಿನ ಸರ್ಕಾರದ ಆದೇಶ, ಅಧಿನಿಯಮಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳಲ್ಲಿನ ಸೂಚೀಕರಿಸಿದ ಹಾಗೂ ವರ್ಗೀಕರಿಸಿದ ಕಡತಗಳು/ ದಾಖಲೆ/ವಹಿಗಳನ್ನು ಕ್ರಮಬದ್ಧವಾಗಿ ಸಂರಕ್ಷಿಸಲು ಅಥವಾ ನಾಶಗೊಳಿಸುವ ದಿಸೆಯಲ್ಲಿ ಅಗತ್ಯ ಕ್ರಮಗಳನ್ನು ಜರುಗಿಸಲು **<u>"ಅಭಿಲೇಖಾಲಯ"(ರೆಕಾರ್ಡ್ ರೂಂ)</u>**ವನ್ನು ಕುವೆಂಪು ಶತಮಾನೋತ್ಸವ ಭವನದ ಬಲಭಾಗದ ಕಟ್ಟಡದ ಹಳೆಯ ಸ್ನಾತಕೋತ್ತರ ಕನ್ನಡ ವಿಭಾಗದ ಖಾಲಿಯಿರುವ (ಒಂದನೇ ಅಂತಸ್ತು) ತರಗತಿ ಕೊಠಡಿಗಳಲ್ಲಿ ಪ್ರಾರಂಭಿಸಲಾಗಿರುತ್ತದೆ.

ಆಡಳಿತಾಂಗದ ಪ್ರತಿಯೊಂದು ಅಧಿಕೃತ ವಿಭಾಗಗಳು ಹಾಗೂ ಅವುಗಳ ಮುಖ್ಯಸ್ಥರುಗಳು, ವಿಷಯ ನಿರ್ವಾಹಕರುಗಳು ತಮ್ಮ ತಮ್ಮ ವಿಭಾಗಗಳಲ್ಲಿನ ಕಡತ/ದಾಖಲೆ/ ವಹಿಗಳು ಸೃಜನೆಯಾಗುವ ಹಂತದಿಂದ ಅಭಿಲೇಖಾಲಯಕ್ಕೆ ಸಂರಕ್ಷಣೆ ರವಾನಿಸುವ ವಿವಿಧ ಹಂತಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಒಂದು ಮಾರ್ಗಸೂಚಿ ಹಾಗೂ ನಿರ್ವಹಿಸಬೇಕಾದ ವಹಿಗಳ ನಮೂನೆಗಳನ್ನು ಈ ಸುತ್ತೋಲೆಗೆ ಲಗತ್ತಿಸಿದಂತೆ ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪರಿಚಲಿಸಲಾಗಿರುತ್ತದೆ. ಅದರಂತೆ ಸೂಕ್ತ ಕ್ರಮಗಳನ್ನು ಜರುಗಿಸಲು ಸೂಚಿಸಲಾಗಿದೆ.

ಅಭಿಲೇಖಾಲಯದಲ್ಲಿ ಲಭ್ಯವಾಗಬಹುದಾದ ಸ್ಥಳಾವಕಾಶ ಹಾಗೂ ಸೌಲಭ್ಯಗಳ ಆಧಾರದ ಮೇಲೆ ಆದ್ಯತೆಯನುಸಾರ ಪರಿಗಣಿಸಲಾಗುವ ಅಧಿಕೃತ ಆಡಳಿತ ವಿಭಾಗಗಳ ಕಡತ/ ದಾಖಲೆ/ವಹಿಗಳ ಸಂರಕ್ಷಣೆಗೆ ಮಾತ್ರ ಸ್ಥಳಾವಕಾಶವನ್ನು ನೀಡಿ ಸಂರಕ್ಷಣೆಗೆ ಒಳಪಡಿಸಲಾಗುತ್ತದೆ. ಇದರಿಂದ ಹೊರತಾದ ವಿಭಾಗಗಳು ತಮ್ಮ ತಮ್ಮ ವಿಭಾಗಗಳಲ್ಲೇ ಸಂರಕ್ಷಣೆಯ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಂಡು ಅಭಿಲೇಖಾಲಯದ ಮುಂದಿನ ಮಾರ್ಗದರ್ಶನವನ್ನು ನಿರೀಕ್ಷಿಸಬೇಕಾಗುತ್ತದೆ.

ಕುಲಸಚಿವರು

ಗೆ,

1. ಆಡಳಿತಾಂಗದ ಎಲ್ಲ ವಿಭಾಗದ ಉಪಕುಲಸಚಿವರು/ ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ
2. ಕುಲಸಚಿವರು (ಪ್ರ)/ ಎಲ್ಲ ಸಂಯೋಜನಾಧಿಕಾರಿಗಳು/ ನಿರ್ದೇಶಕರುಗಳು ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ
3. ಹೆಚ್.ಆರ್.ಎಂ/ ಕಾನೂನು ಕೋಶ/ ಅಭಿವೃದ್ಧಿ/ ಹಣಕಾಸು/ ಪ್ರಾಧಿಕಾರ/ ಆಪ್ತಶಾಖೆ (ಕುಲಸಚಿವರು) / ಆಪ್ತಶಾಖೆ (ಕುಲಪತಿಗಳು) / ಶೈಕ್ಷಣಿಕ / ಕಾಲೇಜು ಅಭಿವೃದ್ಧಿ ಮಂಡಳಿ/ ಇಂಜಿನಿಯರಿಂಗ್ / ಪರೀಕ್ಷಾಂಗ/ ಎಸ್.ಸಿ. ಎಸ್.ಟಿ / ಓ.ಬಿ.ಸಿ ಘಟಕ/ ದೂರಶಿಕ್ಷಣ ನಿರ್ದೇಶಾಲಯ/ ಎಸ್ಟೇಟ್ / ಆಸ್ಪತ್ರೆ/ ಪುರುಷ/ ಮಹಿಳಾ ಹಾಸ್ಟೆಲ್‌ಗಳು.
4. ಸಂಯೋಜನಾಧಿಕಾರಿಗಳು, ಯು.ಸಿ.ಸಿ.ಎಫ್ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ :– ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ (Website) ಪ್ರಕಟಿಸಲು ಸೂಚಿಸಿದೆ.
5. ಹೆಚ್ಚುವರಿ ಪ್ರತಿ
6. ಕಛೇರಿ ಪ್ರತಿ